‘ಈಗ ರಾತ್ರಿ ಬಸ್ಸಿಗೆ ಹೊರಡ್ತಾರೆ. ಬೆಳಗ್ಗೆ ಬಂದು ಬಿಡ್ತಾರೆ.’

‘ಬಸ್ ಸ್ಟಾಪಿಗೆ ಹೋಗಬೇಕಾಮ್ಮ?’ ಮಗನ ಪ್ರಶ್ನೆ.

‘ಇಲ್ಲ... ಇಲ್ಲ... ಆಟೋದಲ್ಲೋ, ಟ್ಯಾಕ್ಸಿಯಲ್ಲೋ ಬರ್ತಾರೆ. ಫ್ರೂಟ್ ಸಾಲಡ್ ಇದೆ ನೋಡು. ತಗೋ... ಬಟ್ಟಲಿಗೆ ಹಾಕಿಕೊಡ್ಲಾ?’ ಫ್ರಿಡ್ಜ್ ಬಾಗಿಲು ತೆರೆದೆ.

‘ಅವನು ತಗೊತ್ತಾನೆ. ನೀವು ಬನ್ನಿ ಅತ್ತೆ, ಚಪಾತಿ ತಣ್ಣಗಾಗುತ್ತೆ. ವಿವೇಕ್, ನೀನು ನಮಗೂ ಫ್ರೂಟ್ ಸಾಲಡ್ ಸರ್ವ್ ಮಾಡು... ಅತ್ತೆ ನಿನ್ನ ಸೋಮಾರಿ ಅಂತಿದ್ದಾರೆ. ಅಲ್ಲ ಅಂತ ಪ್ರೂವ್ ಮಾಡು...’ ನಕ್ಕು, ಸೊಸೆಯ ಹಿಂದೆ ಡೈನಿಂಗ್ ಹಾಲಿಗೆ ನಡೆದೆ. ಇವರು ಒಬ್ಬರೇ ತಿರುಪತಿಗೆ ಹೋಗಿದ್ದಾರೆ. ಮಗ, ಸೊಸೆ ಬಂದಾಗ ಎಲ್ಲರೂ ತಿರುಪತಿಗೆ ಹೋಗಿ ಬರೋಣ ಎಂದು ಸೇವೆಗೆ ಬುಕ್ ಮಾಡಿದ್ದು. ಆದರೆ ಬಂದ ಮೇಲೆ ಗೊತ್ತಾಗಿದ್ದು, ಸೊಸೆ ಸೌಮ್ಯಗೆ ನಾಲ್ಕು ತಿಂಗಳು ಎಂದು. ನಮಗೆ ಸರ್‌ಪ್ರೈಜ್ ಕೊಡಬೇಕು ಎಂದು ಹೇಳಿರಲಿಲ್ಲ. ಬಸುರಿ ಬೆಟ್ಟ ಹತ್ತುವ ಹಾಗೆ ಇಲ್ಲ. ಮನೆಗೆ ಬಂದವರನ್ನು ಬಿಟ್ಟು ನಾನು ಹೋಗುವುದು ಸರಿಕಾಣಲಿಲ್ಲ. ಹಾಗಾಗಿ ಪ್ರಕಾಶ್ ಒಬ್ಬರೇ ತಿರುಪತಿಗೆ ಹೋಗಿರುವುದು.

‘ಪಾಪ... ನಿಮ್ಮ ಮಗ ಸೋಮಾರಿ ಏನೂ ಅಲ್ಲ ಅತ್ತೆ. ಅಲ್ಲಿ ಕೆಲಸದವರು ಇಲ್ಲ ಅಲ್ಲವೇ... ತುಂಬಾ ಸಹಾಯ ಮಾಡ್ತಾರೆ. ಫಸ್ಟ್ ಕ್ಲಾಸಾಗಿ ಗೊಜ್ಜು ಮಾಡ್ತಾರೆ. ನೀವು ಅಮ್ಮ ಅಲ್ವಾ ಅದಕ್ಕೆ... ಫೀಲ್ಸ್ ಲೇಜಿ ಹಿಯರ್...’ ಅವಳ ಗಂಡನ ಪರ ವಹಿಸಿದಳು... ನಾನು ನಕ್ಕೆ.

ವಿವೇಕ್ ಫ್ರೂಟ್ ಸಾಲಡ್ ಮುಂದಿಟ್ಟ.

‘ಥ್ಯಾಂಕ್ಸ್ ವಿವೇಕ್...’ ಚಪಾತಿ ಮುರಿದು ಸಾಗುವಿನಲ್ಲಿ ಅದ್ದಿ ಬಾಯಿಗಿಟ್ಟುಕೊಂಡೆ.

‘ಅತ್ತೆ... ನಾವು ಹಣ್ಣು ತೊಗೊಂಡು ಹೋಗಿದ್ವಲ್ಲ... ಎಲ್ಲರಿಗೂ ಕೊಟ್ಟೆ... ಆಕೆ ಅವರ ರೂಮಿಗೆ ಹೋಗಿ ಬಿಟ್ಟಿದ್ರು... ನಾವು ಇರೋವರೆಗೂ ಆಕೆ ಆಚೆ ಬರಲೇ ಇಲ್ಲ...’

‘ನೀನು ಇನ್ನೂ ಆಕೆಯ ಬಗ್ಗೆಯೇ ಮಾತಾಡ್ತಾ ಇದ್ಯ?... ನಂಗೆ ತಲೆ ಕೆಡುತ್ತೆ ಅಷ್ಟೇ. ನಮ್ಮ ಪೈಕಿ ಯಾರೂ ವೃದ್ಧಾಶ್ರಮದಲ್ಲಿ ಇಲ್ಲ ಅಲ್ಲವೇನಮ್ಮ?’ ಮಗನ ಪ್ರಶ್ನೆ.

‘ಹೂಂ... ಯಾರೂ ಇಲ್ಲಪ್ಪ...’

‘ನಮ್ಮ ಮದುವೆಗೆ ಬಂದಿದ್ರು... ನನಗೆ ನೋಡಿದ ನೆನಪಿದೆ ಅತ್ತೆ. ನಮ್ಮ ಮದುವೆ ಆಲ್ಬಂ ಇದ್ದರೆ ತೆಗೀರಿ... ಅವರ ಫೋಟೊ ಇರಬಹುದು...’

‘ಆಲ್ಬಂ... ಅಲ್ಲೇ ಟೀವಿ ಸ್ಟ್ಯಾಂಡ್ ಕೆಳಗಡೆ ಇದೆ ನೋಡು. ಆದರೆ ಮೂರು ವರ್ಷದ ಹಿಂದೆ ನಿನ್ನ ಮದುವೆಯಲ್ಲಿ ನೋಡಿದವರನ್ನು ನೆನಪಿಟ್ಟುಕೊಂಡಿದ್ಯಾ?...’

‘ಅವಳು ಹಾಗೇ... ಅವಳ ಮೆಮೊರಿ ಪವರ್ ನನ್ನ ಪವರ್‌ಲೆಸ್ ಮಾಡಿಬಿಡುತ್ತೆ... ನೀನು ಸರಿಯಾಗಿ ವಿಚಾರಿಸಬೇಕಿತ್ತು ಅಮ್ಮ, ಏನೇನೋ ನೆನಪಿನಲ್ಲಿ ಇಟ್ಟುಕೊಂಡು ಕಾಡ್ತಾಳೆ...’ ಮಗ ದೂರಿದ.

‘ಹೂಂ... ನಿಮ್ಮಮ್ಮ... ನನಗೆ ಮೆಮೋರಿ ಟೆಸ್ಟ್ ಕೊಡಬೇಕಿತ್ತು... ಅತ್ತೆ... ನನ್ನ ಫ್ರೆಂಡ್ ನೀತಾ ಅಂತ ಇದಾಳೆ... ಅವಳಿಗೆ ಬಾಗಿಲಿನಿಂದ ಸೋಫಾವರೆಗೆ ನಡೆದುಕೊಂಡು ಬಾ, ನ್ಯೂಸ್ ಪೇಪರ್ ಓದು, ಬಿಸಿಲಿಗೆ ಬಾ, ಹಾಡು ಹೇಳು, ಚೂಡಿದಾರ್ ಹಾಕ್ಕೊಂಡು ಬಾ, ಮುಖ ತೊಳೆದುಕೊಂಡು ಬಾ... ಅಂತೆಲ್ಲಾ ವಧು ಪರೀಕ್ಷೆ ಮಾಡಿದ್ರಂತೆ... ಅವಳ ಅತ್ತೆ...’

ಕೈ ತೊಳೆದು ಬಂದು ಟೀವಿ ಬಳಿ ಹೋಗಿ ಆಲ್ಬಂ ಹೊತ್ತುಕೊಂಡು ಬಂದಳು ಸೌಮ್ಯ.

‘ನಿನ್ನ ಫ್ರೆಂಡ್ ಎಲ್ಲೋ ಉತ್ಪ್ರೇಕ್ಷೆ ಮಾಡ್ತಾ ಇದ್ದಾಳೆ. ಹಾಗೆ ಮಾಡಿದ್ರೆ ಮದುವೆ